## ಬೊಂಬೆ ಮಿಠಾಯಿ ನೆನಪು

ಇದು 'ಬೊಂಬೆ ಮಿಠಾಯಿ' ಮಾರುವ ಮಿಠಾಯಿವಾಲಾನ ಚಿತ್ರ. ಈಚೆಗೆ ಕಣ್ಣಿಗೆ ಬಿದ್ದಾಗ ಕ್ಲಿಕ್ಕಿಸಿದ ಚಿತ್ರವಿದು. ಈ ಮಿಠಾಯಿವಾಲಾನನ್ನು ಕಂಡಾಗ, ನಾವು ಕಿರಿಯರಿದ್ದಾಗ ಸಿಹಿಯಾದ ಬೊಂಬೆ ಮಿಠಾಯಿ ಜತೆಗೆ ಪದಗಳನ್ನು ಹಾಡುತ್ತಾ, ಗಿಲಿಗಿಲಿ ಗೆಜ್ಜೆ ಸದ್ದು ಮಾಡುತ್ತಾ, ಶಾಲೆಗಳ ಹೊರಗೆ ಮಕ್ಕಳು ಹೊರಬರುವುದನ್ನೇ ನಿರೀಕ್ಷಿಸುತ್ತಿದ್ದ ಮಿಠಾಯಿವಾಲಾಗಳ ನೆನಪಾಯಿತು.

ಈ ಮಿಠಾಯಿವಾಲಾಗಳು ಸಾಮಾನ್ಯವಾಗಿ ಮಿಠಾಯಿದಂಡವನ್ನು ಹೊತ್ತು ನಡೆದುಕೊಂಡು ಬರುತ್ತಿದ್ದರು. 10, 25 ಪೈಸೆ ನೀಡಿದರೆ ನಾದಿದ ಹಿಟ್ಟಿನಂತಿದ್ದ ಬಣ್ಣಬಣ್ಣದ ಕಣಕದ ಎಳೆಗಳನ್ನು ಕಿತ್ತು ನಮಗಿಷ್ಟದ ಆಕಾರವನ್ನಾಗಿಸಿ ಕೊಡುತ್ತಿದ್ದರು. ಬೆರಳುಗಳ ಮೇಲೆ ಉಂಗುರವಾಗಿ, ಮಣಿಕಟ್ಟಿಗೆ ವಾಚಾಗಿ, ಬಳೆಗಳಾಗಿ ರೂಪ ಪಡೆಯುತ್ತಿದ್ದ ಈ ಬೊಂಬೆ ಮಿಠಾಯಿ ನೆನಪಾಗಿ ಅದರ ರುಚಿಗಾಗಿ ನಾಲಿಗೆಯೂ ತಡವರಿಸಿತು. ನನ್ನ ಬಾಲ್ಯದ ಕಾಲದಲ್ಲಿ ಹೇರಳವಾಗಿದ್ದ ಈ ರುಚಿ ಉಣಬಡಿಸುವ ಕೈಗಳು ಈಗ ತೀರಾ ಕಡಿಮೆಯಾಗಿವೆ. ಇಂದಿನ ವಿವಿಧ ಬಗೆಯ ಚಾಕೊಲೇಟು, ಕ್ಯಾಂಡಿ, ಚಿಪ್ಸ್, ಕುರ್ಕುರೆಗಳ ಮುಂದೆ ಬೊಂಬೆ ಮಿಠಾಯಿ ಸವಿಯಲೂ ಮಕ್ಕಳ ಮನಸ್ಸು ಹಾತೊರೆಯುತ್ತದೆ. ಆದರೆ ನಾನಾ ಕಾರಣಗಳಿಗಾಗಿ ಅದು ಅವರ ಕೈ ತಲುಪುತ್ತಿಲ್ಲ. ಆದರೂ, ಅಲ್ಲೊಬ್ಬ ಇಲ್ಲೊಬ್ಬರಂತೆ ಮಿಠಾಯಿ ಮಾರಾಟಗಾರರು ಸೈಕಲ್, ಬೈಕುಗಳಲ್ಲಿ ಬಂದು ಕಲ್ಯಾಣಭವನಗಳ ಬಳಿಯೋ, ಶಾಲೆಗಳ ಸಮೀಪದಲ್ಲೋ ಕಿರಿಯರ ನಿರೀಕ್ಷೆಯಲ್ಲಿರುತ್ತಾರೆ!

–ಡಿ.ವಿ. ಮೋಹನ ಪ್ರಕಾಶ್, ಮೈಸೂರು




## ಮೊಸರು ಬೆಣ್ಣೆ ಇಡುವ 'ಸಿಕ್ಕ'



ಹಿಂದೆ ಹಳ್ಳಿಗಳಲ್ಲಿ ಮೊಸರು ಕಡೆದು ಮಜ್ಜಿಗೆ ಮತ್ತು ಬೆಣ್ಣೆಯನ್ನು ಮಕ್ಕಳಿಗೆ ಸಿಕ್ಕಬಾರದೆಂದು ಮೇಲೆ ತೆಗೆದಿಡುತ್ತಿದ್ದ 'ಸಿಕ್ಕ' ಇದು. ಇದನ್ನು ಕೆಲವು ಕಡೆ ಬಲ ಎಂದೂ ಕರೆಯುತ್ತಾರೆ. ನಂದಗೋಕುಲದಲ್ಲಿ ಬಾಲ ಕೃಷ್ಣನಿಗೆ ಹಾಲು, ಮೊಸರು ಮತ್ತು ಬೆಣ್ಣೆ ಕೈಗೆಟುಕದ ಹಾಗೆ ಮೇಲೆ ಇಡಲು ಗೋಪಿಕೆಯರ ಮನೆಗಳಲ್ಲಿ 'ಸಿಕ್ಕ'ವನ್ನು ಬಳಸುತ್ತಿದ್ದರಂತೆ. ತೆಂಗಿನ ಹುರಿ ಹಗ್ಗವನ್ನು ಹೆಣೆದು ಮಾಡುವ ಇದರಲ್ಲಿ ಹಿಂದೆ ಮಣ್ಣಿನ ಪಾತ್ರೆಯಲ್ಲಿ ಹಾಲು, ಮಜ್ಜಿಗೆ ಮುಂತಾದುವನ್ನು ಇಡುತ್ತಿದ್ದರು. ಈಗ ಸ್ಟೀಲಿನ ಪಾತ್ರೆಯಲ್ಲಿ ಮೊಸರು, ಬೆಣ್ಣೆ ಇಡುವುದನ್ನು ಕಾಣುತ್ತೇವೆ.

ಸಾಮಾನ್ಯವಾಗಿ 'ಸಿಕ್ಕ'ವನ್ನು ಕೋಣೆಯ ಮೂಲೆಯಲ್ಲಿ ಮನೆಯ ಅಡ್ಡಕ್ಕೋ ಅಥವಾ ಮದನ ಕೈಗೋ ಕಟ್ಟಿ ಇಳಿಬಿಡುತ್ತಾರೆ. ಇತ್ತೀಚೆಗೆ ಮಾಯವಾಗಿ ಹೋಗಿರುವ ಹಳೆಯ ಕಾಲದ 'ಸಿಕ್ಕ' ಕಾಸರಗೋಡು ಜಿಲ್ಲೆಯ ಕುಮಾರಮಂಗಲ ಬಳಿಯ ಕಿಳಿಂಗಾರಿನಲ್ಲಿ ನನ್ನ ದೊಡ್ಡಪ್ಪನ ಮಗಳು ಪರಮೇಶ್ವರಿ ಅಕ್ಕನ ಮನೆಯ ದೇವರ ಕೋಣೆಯಲ್ಲಿ ನನ್ನ ಕ್ಯಾಮೆರಾಕ್ಕೆ ಸಿಕ್ಕ ಕ್ಷಣ.

–ಕಜೆ ಸುಬ್ರಹ್ಮಣ್ಯ ಭಟ್, ವೇಣೂರು

## ಕಲ್ಲು ಹೆರೆಯುವ ಕೈಚಳಕ

ಕಣ್ಮರೆಯಾಗುತ್ತಿರುವ ಸಾಂಪ್ರದಾಯಿಕ ಕೈಕಸುಬುಗಳಲ್ಲಿ ಕಲ್ಲು ಹೆರೆಯುವುದೂ ಒಂದು. ಒರಳು ಕಲ್ಲು, ರಾಗಿಬೀಸುವ ಕಲ್ಲುಗಳು ದೀರ್ಘ ಕಾಲ ಬಳಸಿದಾಗ ಅವುಗಳ ಮೇಲ್ಮೈ ನುಣುಪಾಗಿ ಅರೆಯುವಿಕೆಯಲ್ಲಿನ ತಮ್ಮ ಕ್ಷಮತೆಯನ್ನು ಕಳೆದುಕೊಳ್ಳುತ್ತವೆ. ಅವುಗಳ ಮೇಲ್ಪದರವನ್ನು ಹೆರೆದು ಒರಟುಗೊಳಿಸಿದಾಗ ಮತ್ತೆ ತಮ್ಮ ಮೂಲ ಸ್ಥಾನವನ್ನು ಪಡೆಯುತ್ತವೆ. ಮೊನ್ನೆ ನಮ್ಮ ಬಡಾವಣೆಗೆ ಆ ಕಸುಬುದಾರರು ಬಂದಾಗ, ತಿಂಗಳುಗಳ ಹಿಂದೆ ಸವೆದು, ಕೆಲಸಕ್ಕೆ ಬಾರದೇ ಮೂಲೆಸೇರಿದ್ದ ವೆಟ್ ಗ್ರೈಂಡರ್ ಮತ್ತೆ ಚುರುಕುಗೊಂಡಿತ್ತು.

–ಕೆ.ವಿ. ರಾಜಲಕ್ಷ್ಮಿ, ಬೆಂಗಳೂರು



## ದೇವರೇಗತಿ, ಊಟ ಬಲುರುಚಿ!

ನಾಟಕಕಾರ ವಿಲಿಯಂ ಶೇಕ್ಸ್‌ಪಿಯರ್ ಅವರ, '**After all what is in a name**' ಎಂಬ ಉಕ್ತಿಯನ್ನು ಪುಷ್ಟೀಕರಿಸುವಂತಿದೆ ಬೆಂಗಳೂರಿನ ಭುವನೇಶ್ವರಿ ನಗರದಲ್ಲಿರುವ 'ಹೋಟೆಲ್ ದೇವರೇಗತಿ'. ಈ ಹೋಟೆಲ್ ದಿನಪೂರ್ತಿಯೂ ಗ್ರಾಹಕರಿಂದ ಗಿಜಿಗುಡುತ್ತಿರುತ್ತದೆ. ದೇವರೇಗತಿ ಅಂತ ಹೋಟೆಲ್‌ನ ಹೆಸರನ್ನು ಓದಿಕೊಂಡು ಹೋಟೆಲ್‌ಗೆ ಕಾಲಿಡುವ ಗ್ರಾಹಕರ ಹೊಟ್ಟೆಯನ್ನು ತಣಿಸಲು ತರಹೇವಾರಿ ರುಚಿಕರ ತಾಜಾ ಖಾದ್ಯಗಳು ಸಿದ್ಧವಾಗಿರುತ್ತವೆ. ಬೆಲೆಯೂ ಅಷ್ಟೊಂದು 'ಬಿಸಿ'ಯಲ್ಲ. ರುಚಿಕರವಾದ ಮತ್ತು ಕೈಗೆಟಕುವ ಬೆಲೆಯ ತಿಂಡಿ, ತಿನಿಸುಗಳು ದೊರೆತರೆ ಹೆಸರು ಗೌಣ ಎಂಬುವುದಕ್ಕೆ ಈ ಹೋಟೆಲ್ ತಾಜಾ ಸಾಕ್ಷಿಯಾಗಿದೆ.

–ಶ್ರೀನಿವಾಸನ್ ಎಸ್.ಕೆ., ಬೆಂಗಳೂರು

